**ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಬನಹಟ್ಟಿ.**

**ಸಿಸಿ ನಂಃ 575/2025**
**ಸಿಡಬ್ಲ್ಯೂಃ 13 ಪಿಡಬ್ಲ್ಯೂಃ 11**

| | | |
|---|---|---|
| ಸಾಕ್ಷಿದಾರರ ಹೆಸರು | ಅಕ್ಷಯ ಗೆದ್ದೆಪ್ಪನ್ನವರ | |
| ತಂದೆ/ಗಂಡನ ಹೆಸರು | ಮಹೇಶ್ವರ | |
| ವಯಸ್ಸು | 28 | |
| ಉದ್ಯೋಗ | ಛಾಯಾಚಿತ್ರಗಾರ | |
| ವಾಸಸ್ಥಳ | ಬನಹಟ್ಟಿ . | |

**ಸಾಕ್ಷಿಯನ್ನು ಇಂದು ದಿನಾಂಕಃ 22-12-2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

ದಿಃ 12-04-2025 ರಂದು ಚಾಸಾ-13 ರವರು ನನಗೆ ಕರೆಮಾಡಿ ಛಾಯಾಚಿತ್ರವನ್ನು ತೆಗೆಯಲು ಕರೆದರು. ಅದರ ಪ್ರಕಾರ ನಾನು ಚಿಮ್ಮಡ ಗ್ರಾಮದ ಪಿಕೆಪಿಎಸ್ ಹತ್ತಿರ ಭಾವಚಿತ್ರವನ್ನು ತೆಗೆದಿರುತ್ತೇನೆ. ಅದರಂತೆ ವಾಹನ ಬಿಡುಗಡೆ ಸಮಯದಲ್ಲಿಯೂ ಸಹ ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ. ನಾನು ಛಾಯಾಚಿತ್ರದ ತೆಗೆದಿದ್ದ ಕುರಿತು ಡಿವಿಡಿ ಹಾಗೂ ಪ್ರಮಾಣಪತ್ರವನ್ನು ನೀಡಿರುತ್ತೇನೆ. ನಾನು ಸದರಿ ಛಾಯಾಚಿತ್ರಗಳನ್ನು ಮತ್ತು ಪ್ರಮಾಣಪತ್ರವನ್ನು ನೋಡಿದರೇ ಗುರುತಿಸುತ್ತೇನೆ.

2. ಸಾಕ್ಷಿಯು ನಿಪಿ-3, 4 ಮತ್ತು 6 ಅನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-10,15 ,16, 17, 18 , 11 , 12, 13, 14, 23, 24, 25 ನೋಡಿ ಗುರುತಿಸಿರುತ್ತಾರೆ.

3. ಸಾಕ್ಷಿಯು ತಾನು ನೀಡಿದ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು , ಸದರಿ ಪ್ರಮಾಣಪತ್ರವನ್ನು ನಿಪಿ-27 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-27 ಎ ಎಂದು ಗುರುತಿಸಲಾಯಿತು. ಅದರಂತೆ ಸಾಕ್ಷಿಗೆ ಸದರಿ ಪ್ರಮಾಣಪತ್ರದ ಭಾಗ-ಅ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು , ಸದರಿ ಪ್ರಮಾಣಪತ್ರವನ್ನು ನಿಪಿ-28 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-28 ಎ ಎಂದು ಗುರುತಿಸಲಾಯಿತು.

4. ಅದರಂತೆ ಸಾಕ್ಷಿಗೆ ಸದರಿ ಪ್ರಮಾಣಪತ್ರದ ಭಾಗ-ಬ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು , ಸದರಿ ಪ್ರಮಾಣಪತ್ರವನ್ನು ನಿಪಿ-29 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-29 ಎ ಎಂದು ಗುರುತಿಸಲಾಯಿತು.

5. ಸಾಕ್ಷಿಯ ಛಾಯಾಚಿತ್ರಗಳನ್ನು ಇರುವ ಸಿಡಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಃ ಎಲ್ ಎ ಡಿ ಸಿ ವಕೀಲರಿಂದಃ**

ನಾನು ನ್ಯಾಯಾಲಯಕ್ಕೆ ಪ್ರಸ್ತುತ ಪ್ರಕರಣದಲ್ಲಿ ಛಾವಚಿತ್ರಗಳನ್ನು ತೆಗೆದಿದ್ದು ಅದರ ಕುರಿತು ಸಾಕ್ಷಿ ಹೇಳಲು ಬಂದಿರುತ್ತೇನೆ. ನಾನು ಸುಮಾರು 10 ವರ್ಷಗಳಿಂದ ಫೋಟೋ ಸ್ಟುಡಿಯೋ ಅನ್ನು ಇಟ್ಟು ಕೊಂಡಿರುತ್ತೇನೆ. ನನಗೆ ಛಾಯಾಚಿತ್ರಗಳನ್ನು ತೆಗೆಯಲು ಬನಹಟ್ಟಿ ಪಿಎಸ್ಐ ರವರು ಹೇಳಿರುತ್ತಾರೆ. ಸದರಿಯವರು ನನಗೆ ಲಿಖಿತವಾಗಿ ಏನು ಬರೆದುಕೊಟ್ಟಿರುವುದಿಲ್ಲ. ದಿಃ 12-04-2025 ರಂದು ನನಗೆ ಛಾಯಾಚಿತ್ರಗಳನ್ನು ತೆಗೆಯಲು ಕರೆದಿದ್ದರು. ನಾನು ಛಾಯಾಚಿತ್ರಗಳನ್ನು ತೆಗೆಯಲು ಹೋದಾಗ ಬೆಳಿಗ್ಗೆ 10 ರಿಂದ 10.30 ಗಂಟೆ ಆಗಿತ್ತು . ಚಿಮ್ಮಡಿನ ಪಿಕೆಪಿಎಸ್ ಸ್ಥಳ ಸಾರ್ವಜನಿಕ ಸ್ಥಳವಾಗಿರುತ್ತದೆ ಎಂದರೆ ಹೌದು. ನಂತರ ನಾನು ವಾಹನ ಬಿಡುಗಡೆ ಸಮಯದಲ್ಲಿಪೊಲೀಸ ಠಾಣೆಯಲ್ಲಿ ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ. ಸದರಿ ಛಾಯಾಚಿತ್ರಗಳನ್ನು 4 ಆ್ಯಂಗಲ್ಗಳಿಂದ ತೆಗೆದಿರುತ್ತೇನೆ. ನಾನು ಛಾಯಾಚಿತ್ರಗಳನ್ನು ತೆಗೆಯುವಾಗ ನಿಕಾನ 7100 ರಿಂದ ತೆಗೆದಿರುತ್ತೇನೆ. ಇದರ ಹೊರತುಪಡಿಸಿ ಬೇರೆ ಯಾವುದರಿಂದಲೂ ತೆಗದಿರುವುದಿಲ್ಲ. ಸದರಿ ಛಾಯಾಚಿತ್ರಗಳನ್ನು ಕಲರ್ ಪ್ರಿಂಟ್ನಲ್ಲಿ ತೆಗೆದಿರುತ್ತೇನೆ. ನಾನು ಸುಮಾರು 15 ರಿಂದ 20 ಫೋಟೋಗಳನ್ನು ತೆಗೆದಿರುತ್ತೇನೆ, ಅದರಲ್ಲಿ ಒಂದೇ ಕಾಫಿಯಂತೆ ಕೊಟ್ಟಿರುತ್ತೇನೆ. ಸದರಿ ಛಾಯಾಚಿತ್ರಗಳು ತೆಗೆಯುವ ಸಮಯದಲ್ಲಿ ಯಾವುದೇ ವೀಡಿಯೋ ಅನ್ನು ಮಾಡಿರುವುದಿಲ್ಲ. ನಿಪಿ-27 ಅನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿರುವ ಸಹಿಯನ್ನು ಗುರುತಿಸಿರುತ್ತಾರೆ ಹಾಗೂ ಅದರಲ್ಲಿರುವ ಮಾಹಿತಿ ಸರಿಯಾಗಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಫೋಟೋಗಳನ್ನು ತೆಗೆದ ನಂತರ ಗಣಕಯಂತ್ರದಲ್ಲಿ ಹಾಕಿಕೊಂಡು ನಂತರ ಪ್ರಿಂಟ್ ತೆಗೆದು ಕೊಟ್ಟಿರುತ್ತೇನೆ.

2. ಸದರಿ ನಿಪಿ-27 ರ ಜೊತೆಗೆ ನಿಪಿ-28 ಹಾಗೂ ನಿಪಿ-29 ಅನ್ನು ಕೊಟ್ಟಿರುತ್ತೇನೆ ಎಂದರೆ ಹೌದು. ನಿಪಿ-28 ಮತ್ತು ನಿಪಿ-29 ರಲ್ಲಿರುವ ಸಹಿಗಳು ನನ್ನದೇ ಇರುತ್ತವೆ. ನಿಪಿ-28 ಮತ್ತು 29

ರಲ್ಲಿ ಸಹಿ ನಾನೇ ಮಾಡಿರುತ್ತೇನೆ ಆದರೆ ಅದರ ಕೆಳಗೆ ಹೆಸರು ನಾನು ಬರೆದಿರುವುದಿಲ್ಲ. ನಿಪಿ-28 ರಲ್ಲಿ ಡಿಡಿಆರ್ ಮತ್ತು ಡಿವಿಡಿ ಅಂತ ಬರೆಯಲಾಗಿದೆ ಎಂದರೆ ಹೌದು. ಅದರಂತೆ ನಿಪಿ-29 ರಲ್ಲಿ ಸಿಡಿ ಮತ್ತು ಡಿವಿಡಿ ಅಂತ ಬರೆಯಲಾಗಿದೆ ಎಂದರೆ ಹೌದು. ಸಾಕ್ಷಿಯು ಮುಂದುವರೆದು ನಾನು ಮೊದಲು ಡಿವಿಡಿಯನ್ನು ನೀಡಿದ್ದು ಅದರ ನಂತರ ಡಿವಿಆರ್ ನಲ್ಲಿ ಹಾಕಿಕೊಂಡು ಪ್ರಿಂಟ ತೆಗದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅವುಗಳನ್ನು ತೆಗೆದು ಸುಮಾರು 10 ರಿಂದ 15 ದಿವಸಗಳ ಕಾಲ ನನ್ನ ಹತ್ತಿರ ಇಟ್ಟುಕೊಂಡಿರುತ್ತೇನೆ. ಪೊಲೀಸರು ಹೇಳಿಕೆಯ ಮೇರೆಗೆ ಮತ್ತು ಪೊಲೀಸರು ಹೇಳಿದ ರೀತಿಯಲ್ಲಿ ನಾನು ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ ಎಂದರೆ ಹೌದು. ನನಗೆ ಸರ್ಕಾರದವತಿಯಿಂದ ಯಾವುದೇ ಆದೇಶ ಬಂದಿರುವುದಿಲ್ಲ ಎಂದರೆ ಹೌದು. ಚಾಸಾ-13 ರವರು ಪೋಟೋಗಳನ್ನು ತೆಗೆಯಲು ಹೇಳಿದರ ಮೇರೆಗೆ ಪೋಟೋಗಳನ್ನು ತೆಗೆದಿರುತ್ತೇನೆ, ಅದರ ಹೊರತಾಗಿ ಏನು ಗೊತ್ತಿಲ್ಲ ಎಂದರೆ ಸರಿ . ನಾನು 10 ವರ್ಷಗಳ ಅನುಭವ ಹೊಂದಿದ್ದರಿಂದ , ಪೊಲೀಸರು ಹೇಳಿದರ ಮೇರೆಗೆ ಛಾಯಾಚಿತ್ರಗಳನ್ನು ತೆಗದಿರುತ್ತೇನೆ ಎಂದರೆ ಹೌದು. ಯಾವುದೇ ಪ್ರಕರಣದ ಮಾಹಿತಿಯು ನನಗೆ ಗೊತ್ತಿಲ್ಲ ಎಂದರೆ ಹೌದು. ನಿಪಿ-27 ಎ, 28 ಎ ಹಾಗೂ 29 ಎ ನನ್ನ ಸಹಿಗಳು ಅಲ್ಲ , ಚಾಸಾ-13 ರವರು ಹೇಳಿಕೆಯ ಮೇರೆಗೆ ನಿಪಿ-27 ರಿಂದ 29 ನೀಡಿರುತ್ತೇನೆ ಎಂದರೆ ಸರಿಯಲ್ಲ.

3. ಚಾಸಾ-13 ರವರ ಮಾತುಕೇಳಿಕೊಂಡು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

Sd/-

**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**

**ಬನಹಟ್ಟಿ**